ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 11-12-20

# ಶಾಸಕರ ನಿರಾಸಕ್ತಿ-ಸ್ಪೀಕರ್‌ಗೆ ಬೇಸರ

11/12/20

**ಬೆಂಗಳೂರು:** ಶಾಸನಸಭೆಯ ಕಲಾಪದಲ್ಲಿ ಕಂಡ ನಿರಾಸಕ್ತಿ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ತೀವ್ರ ಬೇಸರ ತಂದಿತೆಂಬುದನ್ನು ನಾಲ್ಕೂ ದಿನಗಳ ಔಪಚಾರಿಕ ಕಲಾಪಗಳು ತೋರಿಸಿಕೊಟ್ಟವು. ಮೊದಲ ದಿನದಿಂದಲೂ ಪೀಠದಿಂದ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳು ಅವರ ನೋವನ್ನು ತೆರೆದಿಟ್ಟವು.

ಪ್ರಾರಂಭದ ದಿನವೇ ಆಸನಗಳು ಖಾಲಿ ಇದ್ದುದರಿಂದ 'ದಯವಿಟ್ಟು ಸದಸ್ಯರು ತಮ್ಮ ಜವಾಬ್ದಾರಿಗಳನ್ನು ಅರಿತುಕೊಳ್ಳಬೇಕು' ಎಂದು ಸ್ಪೀಕರ್ ಹೇಳಿದ್ದರು. ಇದಾದ ನಂತರವೂ ಸದಸ್ಯರ ನಿರಾಸಕ್ತಿ ದೂರವಾಗದ್ದರಿಂದ ಅಧಿವೇಶನದ ಭವಿಷ್ಯ ನಿರ್ಧರಿಸಲು ಕಲಾಪ ಸಲಹಾ ಸಮಿತಿ ಸಭೆಯನ್ನು ಕರೆಯುವ ಅನಿವಾರ್ಯತೆಯೂ ಎದುರಾಯಿತು. ಈ ಸಭೆಯಲ್ಲಿ ಅಧಿವೇಶನ ಮೊಟಕು ಮಾಡುವ ತೀರ್ಮಾನಕ್ಕೆ ಬಂದನಂತರವೂ ಬಹುತೇಕ ಸದಸ್ಯರು ಸದನದತ್ತ ಬರಲೇ ಇಲ್ಲ.

'ನೀವು ಕಲಾಪಗಳಲ್ಲಿ ಗಂಭೀರವಾಗಿ ಭಾಗವಹಿಸಬೇಕು. ವಿಷಯಗಳ ಮಹತ್ವವನ್ನು ಅರಿತುಕೊಳ್ಳಬೇಕು. ಭಾಷಣ ಮಾಡಿ ಹೋಗುವುದಕ್ಕಷ್ಟೇ ಉಪಸ್ಥಿತಿ ಸೀಮಿತವಾಗಿರಬಾರದು. ಹಾಗೆಯೇ ಎಲ್ಲರೂ ಎಲ್ಲ ವಿಷಯಗಳ ಬಗ್ಗೆ ಮಾತನಾಡಲೇಬೇಕು ಎನ್ನುವ ಉತ್ಸುಕತೆಯೂ ಸಲ್ಲ' ಎಂದು ಅವರು ಕಿವಿಮಾತು ಹೇಳಿದ್ದಕ್ಕೂ ಪ್ರಸಕ್ತ ಅಧಿವೇಶನ ಸಾಕ್ಷಿಯಾಯಿತು.

ಇದಷ್ಟೇ ಅಲ್ಲದೇ ನಿರ್ದಿಷ್ಟ ವಿಷಯವೊಂದರ ಮೇಲೆ ಮಾತನಾಡಲು ಅಥವಾ ಸರ್ಕಾರದ ಗಮನ ಸೆಳೆಯಲು ಬಯಸಿ ನೋಟಿಸ್ ಕೊಟ್ಟು ಗೈರಾದವರ ಬಗ್ಗೆಯೂ ಸ್ಪೀಕರ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

'ಸದನಕ್ಕೆ ಗೌರವ ಇದೆ. ನೋಟಿಸ್ ನೀಡಿದ ಶಾಸಕರೇ ಸದನದಲ್ಲಿ ಇರುವುದಿಲ್ಲ ಅಥವಾ ಬರುವುದಿಲ್ಲ ಎಂದರೆ ಏನರ್ಥ? ಕಾನೂನ ಮತ್ತು ಸಂಸದೀಯ ವ್ಯವಹಾರ ಸಚಿವರೇ ಇದಃ ಏನಾದರೊಂದು ಪರಿಹಾರ ಕಂಡುಹಿಡಿಯಿರಿ' ಎಂದು ಒಂದು ಸಂದರ್ಭದಲ್ಲಿ ಅವರು ಹೇಳುವಂತಾಯಿತು. ಸ್ಪೀಕರ್ ಮಾತಿಗೆ ಸಚಿವ ಜೆ.ಸಿ.ಮಾಧುಸ್ವಾಮಿ ಮತ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯನವರೂ ಧ್ವನಿಗೂಡಿಸಿದರು. ಹೀಗೆ ಗೈರುಹಾಜರಾಗುವುದು ಬೇಜವಾಬ್ದಾರಿತ ಎಂದು ಸಿದ್ದರಾಮಯ್ಯ ಖಂಡಿಸಿದರು. ಇನ್ನುಮೇ ಈ ರೀತಿಯ ವರ್ತನೆ ಪುನರಾವರ್ತಿಸಿದರೆ ಸದನದ ಮಾತನಾಡುವುದಕ್ಕೇ ಅವಕಾಶ ಕೊಡುವುದಿಲ್ಲ ಎಂದು ಸ್ಪೀಕರ ಎಚ್ಚರಿಕೆ ನೀಡುವಂತಾದ ಅಧಿವೇಶನವಿದು. ತಮ್ಮತಮ್ಮ ಗುಂಪುಕಟ್ಟಿಕೊಂಡು ಮಾತನಾಡುತ್ತಿದ್ದ ಉಭಯ ಪಕ್ಷಗ ಶಾಸಕರಿಗೆ ಎರಡು ಬಾರಿ ಕಟುವಾದ ಮಾತುಗಳಲ್ಲಿ ಸ್ಪೀಕರ ಎಚ್ಚರಿಸಿದ ಪ್ರಸಂಗವೂ ನಡೆಯಿತು.

## ಚಳಿಗಾಲದ ಅಧಿವೇಶನಕ್ಕೆ ತೆರೆ

ಕರ್ನಾಟಕ ವಿಧಾನಮಂಡಲದ ಎಂಟನೇ ಅಧಿವೇಶನ ಅನಿರ್ದಿಷ್ಟಾವಧಿಗೆ ಮುಂದೂಡಲ್ಪಟ್ಟಿತು. ಡಿಸೆಂಬರ್ 7ರಿಂದ ಆರಂಭವಾಗಿದ್ದ ಅಧಿವೇಶನ ನಾಲ್ಕೇ ದಿನಕ್ಕೆ ಮೊಟಕುಗೊಂಡಿತು. ಮೊದಲಿನ ನಿರ್ಧಾರದಂತೆ ಡಿಸೆಂಬರ್ 15ನೇ ತಾರೀಕಿನವರೆಗೆ ಅಧಿವೇಶನ ನಡೆಯಬೇಕಾಗಿತ್ತು. ಗ್ರಾಪಂ ಚುನಾವಣೆಗಳ ಹಿನ್ನೆಲೆಯಲ್ಲಿ ಅಧಿವೇಶನ ಮೊಟಕುಗೊಂಡಿತು.

ಗೋಹತ್ಯೆ ನಿಷೇಧ ಕಾಯ್ದೆ ಹಾಗೂ ಬಿಬಿಎಂಪಿ ಕಾಯ್ದೆಗಳನ್ನು ವಿಧಾನಸಭೆ ಈ ಅಧಿವೇಶನದಲ್ಲಿ ಅಂಗೀಕರಿಸಿತು. ಮೇಲ್ಮನೆಯಲ್ಲಿ ಕಳೆದ ಬಾರಿ ತಿರಸ್ಕೃತಗೊಂಡಿದ್ದ ಭೂಸುಧಾರಣೆ ಕಾಯ್ದೆ ಹಾಗೂ ಎಪಿಎಂಸಿ ಕಾಯ್ದೆಗಳನ್ನು ಆ ಸದನ ಅಂಗೀಕರಿಸಿತು. ಕಸ್ತೂರಿ ರಂಗನ್ ವರದಿಯಿಂದ ಪಶ್ಚಿಮ ಘಟ್ಟ ಅರಣ್ಯ ಪ್ರದೇಶ ಸುತ್ತಮುತ್ತಲಿನ ನಿವಾಸಿಗಳನ್ನು ಒಕ್ಕಲೆಬ್ಬಿಸುವುದಿಲ್ಲ ಎಂಬ ಅಭಯವೂ ದೊರೆಯಿತು. ನೆರೆಹಾನಿ ಮತ್ತು ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡುವ ವಿಷಯಗಳು ಸುದೀರ್ಘವಾಗಿ ಚರ್ಚೆಯಾದವು.